## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಆರ್.ಎನ್.ಬಿರಾದಾರ್ ಪ್ಯಾರಾ ಮೆಡಿಕಲ್ ಕಾಲೇಜು, ಬಂಜಾರ ನಗರ, ವಿಜಾಪುರ, ಎಸ್‌ಎಸ್‌ಆರ್‌ಬಿ ಪ್ಯಾರಾ ಮೆಡಿಕಲ್ ಇನ್‌ಸ್ಟಿಟ್ಯೂಟ್, ಚಡಚಣ, ಇಂಡಿ ತಾಲ್ಲೂಕು, ವಿಜಾಪುರ ಹಾಗೂ ಡಾ:ಆರ್.ಎನ್.ಬಿರಾದಾರ್ ಪ್ಯಾರಾ ಮೆಡಿಕಲ್ ಇನ್‌ಸ್ಟಿಟ್ಯೂಟ್, ಆದರ್ಶನಗರ, ವಿಜಾಪುರ ಈ ಸಂಸ್ಥೆಗಳ ಮಾನ್ಯತೆಯನ್ನು ರದ್ದುಪಡಿಸುವ ಬಗ್ಗೆ.

******

ಓದಲಾಗಿದೆ:

ಸದಸ್ಯ ಕಾರ್ಯದರ್ಶಿ, ಪ್ಯಾರಾ ಮೆಡಿಕಲ್ ಬೋರ್ಡ್, ಬೆಂಗಳೂರು ಇವರ ಪತ್ರ ಸಂಖ್ಯೆಪಿಎಂಬಿ/03/2014-15, ದಿನಾಂಕ 20.03.2013 ಹಾಗೂ ಸಂಖ್ಯೆಪಿಎಂಬಿ/53/2012-13, 15.02.2013.

ಪ್ರಸ್ತಾವನೆ:

ಮೇಲೆ ಓದಲಾದ ಪತಗಳಲ್ಲಿ ಸದಸ್ಯ ಕಾರ್ಯದರ್ಶಿ, ಪ್ಯಾರಾ ಮೆಡಿಕಲ್ ಬೋರ್ಡ್, ಬೆಂಗಳೂರು ಇವರು ಶ್ರೀ ಆರ್.ಎನ್.ಬಿರಾದಾರ್ ಪ್ಯಾರಾ ಮೆಡಿಕಲ್ ಕಾಲೇಜು, ಬಂಜಾರ ನಗರ, ವಿಜಾಪುರ, ಎಸ್‌ಎಸ್‌ಆರ್‌ಬಿ ಪ್ಯಾರಾ ಮೆಡಿಕಲ್ ಇನ್‌ಸ್ಟಿಟ್ಯೂಟ್, ಚಡಚಣ, ಇಂಡಿ ತಾಲ್ಲೂಕು, ವಿಜಾಪುರ ಹಾಗೂ ಡಾ:ಆರ್.ಎನ್.ಬಿರಾದಾರ್ ಪ್ಯಾರಾ ಮೆಡಿಕಲ್ ಇನ್‌ಸ್ಟಿಟ್ಯೂಟ್, ಆದರ್ಶನಗರ, ವಿಜಾಪುರ ಈ ಸಂಸ್ಥೆಗಳು ಆದರ್ಶನಗರ, ಬಂಜಾರ ಕಾಲೋನಿ, ಬಿಜಾಪುರ ವಿಲಾಸದ ಒಂದೇ ಕಟ್ಟಡದಲ್ಲಿ ನಡೆಯುತ್ತಿದ್ದು, ಗ್ರಂಥಾಲಯ, ಪ್ರಯೋಗ ಶಾಲೆ ಚಾಲನೆಯಲ್ಲಿರುವುದಿಲ್ಲವೆಂದು ಹಾಗೂ ಈ ಸಂಸ್ಥೆಗಳ ವಿದ್ಯಾರ್ಥಿಗಳು ಪರೀಕ್ಷೆಗಾಗಿ ಅರೆ ವೈದ್ಯಕೀಯ ಮಂಡಳಿಗೆ ಸಲ್ಲಿಸಿರುವ ಪರೀಕ್ಷಾ ಅರ್ಜಿಗಳು ಒಂದಕ್ಕೊಂದು ತಾಳೆಯಾಗುತ್ತಿಲ್ಲವೆಂದು ತಿಳಿಸುತ್ತಾ, ತರಗತಿಗಳು ನಿಯತಕಾಲಿಕವಾಗಿ ನಡೆಯುತ್ತಿರುವುದಿಲ್ಲವೆಂದು ಹಾಗೂ ಮೂರು ಕಾಲೇಜುಗಳ ಎಲ್ಲಾ ಕೋರ್ಸ್‌ಗಳು ಎರಡೇ ಕೊಠಡಿಯಲ್ಲಿ ನಡೆಯುತ್ತಿರುವುದಾಗಿ ತಿಳಿಸಿ, ಎಂಬಿಬಿಎಸ್ ವಿದ್ಯಾರ್ಹತೆ ಹೊಂದಿದ ಬೋಧಕರಿಂದ ಯಾವುದೇ ತರಗತಿಗಳನ್ನು ನಡೆಸಿರುವುದರ ಬಗ್ಗೆ ಮಾಹಿತಿ ಇರುವುದಿಲ್ಲವೆಂದು ತಪಾಸಣಾ ಸಂದರ್ಭದಲ್ಲಿ ತಿಳಿದು ಬಂದಿರುತ್ತದೆಂದು ವರದಿ ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ, ಸದರಿ ಕಾಲೇಜುಗಳ ಮಾನ್ಯತೆಯನ್ನು ರದ್ದುಪಡಿಸುವ ಸಂಬಂಧ ಈಗಾಘಲೇ ದ್ವಿ-ಸದಸ್ಯ ಅಧಿಕಾರಿಗಳಿಂದ ವಿಚಾರಣೆ ನಡೆಸಲಾಗಿದುದ, ಈ ವಿಚಾರಣಾಧಿಕಾರಿಗಳು ಸದರಿ ಸಂಸ್ಥೆಯ ಮಾನ್ಯತೆಯನ್ನು ರದ್ದುಪಡಿಸಬಹುದೆಂದು ಶಿಫಾರಸು ಮಾಡಿದ್ದು, ದಿನಾಂಕ 10.04.2016 ರ ಸರ್ಕಾರದ ಪತ್ರದನ್ವಯ ಸದರಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಬಿಜಾಪುರ ಜಿಲ್ಲೆಯಲ್ಲಿರುವ ವಿವಿಧ ಪ್ಯಾರಾ ಮೆಡಿಕಲ್ ಕಾಲೇಜುಗಳಿಗೆ ವರ್ಗಾವಣೆ ಮಾಡಲಾಗಿದೆ ಎಂದು ತಿಳಿಸಿ, ವಿಚಾರಣಾಧಿಕಾರಿಗಳ ಶಿಫಾರಸಿನನ್ವಯ ಸದರಿ ಕಾಲೇಜುಗಳ ಮಾನ್ಯತೆಯನ್ನು ರದ್ದುಪಡಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ ಶ್ರೀ ಆರ್.ಎನ್.ಬಿರಾದಾರ್ ಪ್ಯಾರಾ ಮೆಡಿಕಲ್ ಕಾಲೇಜು, ಬಂಜಾರ ನಗರ, ವಿಜಾಪುರ, ಎಸ್‌ಎಸ್‌ಆರ್‌ಬಿ ಪ್ಯಾರಾ ಮೆಡಿಕಲ್ ಇನ್‌ಸ್ಟಿಟ್ಯೂಟ್, ಚಡಚಣ, ಇಂಡಿ ತಾಲ್ಲೂಕು, ವಿಜಾಪುರ ಹಾಗೂ ಡಾ:ಆರ್.ಎನ್.ಬಿರಾದಾರ್ ಪ್ಯಾರಾ ಮೆಡಿಕಲ್ ಇನ್‌ಸ್ಟಿಟ್ಯೂಟ್, ಆದರ್ಶನಗರ, ವಿಜಾಪುರ ಈ ಸಂಸ್ಥೆಗಳು ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಹೊಂದಿರದ ಕಾರಣ ಸದರಿ 03 ಸಂಸ್ಥೆಗಳ ಮಾನ್ಯತೆಯನ್ನು ರದ್ದುಪಡಿಸಲು ಸರ್ಕಾರವು ತೀರ್ಮಾನಿಸಿ, ಈ ಆದೇಶವನ್ನು ಹೊರಡಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಕುಕ 97 ಎಂಪಿಎಸ್ 2013, ಬೆಂಗಳೂರು, ದಿನಾಂಕ 16-09-2016

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ ಶ್ರೀ ಆರ್.ಎನ್.ಬಿರಾದಾರ್ ಪ್ಯಾರಾ ಮೆಡಿಕಲ್ ಕಾಲೇಜು, ಬಂಜಾರ ನಗರ, ವಿಜಾಪುರ, ಎಸ್‌ಎಸ್‌ಆರ್‌ಬಿ ಪ್ಯಾರಾ ಮೆಡಿಕಲ್ ಇನ್‌ಸ್ಟಿಟ್ಯೂಟ್, ಚಡಚಣ, ಇಂಡಿ

ತಾಲ್ಲೂಕು, ವಿಜಾಪುರ ಹಾಗೂ ಡಾ:ಆರ್.ಎನ್.ಬಿರಾದಾರ್ ಪ್ಯಾರಾ ಮೆಡಿಕಲ್ ಇನ್‌ಸ್ಟಿಟ್ಯೂಟ್, ಆದರ್ಶನಗರ, ವಿಜಾಪುರ ಈ ಸಂಸ್ಥೆಗಳು ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಹೊಂದಿರದ ಕಾರಣ ಸದರಿ 03 ಸಂಸ್ಥೆಗಳ ಮಾನ್ಯತೆಯನ್ನು ತತ್‌ಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಎಸ್.ಜಗದೀಶರೆಡ್ಡಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ವೈದ್ಯಕೀಯ ಶಿಕ್ಷಣ)

**ಇವರಿಗೆ:**

1. ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಆನಂದರಾವ್ ವೃತ್ತ, ಬೆಂಗಳೂರು-560009.
2. ಸದಸ್ಯ ಕಾರ್ಯದರ್ಶಿ, ಪ್ಯಾರಾ ಮೆಡಿಕಲ್ ಬೋರ್ಡ್, ಲಕ್ಷ್ಮಿ ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಂ.5, ಹೊಸ ನಂ.40/20ಎ, ವಾಣಿ ವಿಲಾಸ ಆಸ್ಪತ್ರೆ ಎದುರು, ಫೋರ್ಟ್, ಬೆಂಗಳೂರು-560002.
3. ಅಧ್ಯಕ್ಷರು / ಕಾರ್ಯದರ್ಶಿ / ಪ್ರಾಂಶುಪಾಲರು, ಶ್ರೀ ಆರ್.ಎನ್.ಬಿರಾದಾರ್ ಪ್ಯಾರಾ ಮೆಡಿಕಲ್ ಕಾಲೇಜು, ಬಂಜಾರ ನಗರ, ವಿಜಾಪುರ,
4. ಅಧ್ಯಕ್ಷರು / ಕಾರ್ಯದರ್ಶಿ / ಪ್ರಾಂಶುಪಾಲರು, ಎಸ್‌ಎಸ್‌ಆರ್‌ಬಿ ಪ್ಯಾರಾ ಮೆಡಿಕಲ್ ಇನ್‌ಸ್ಟಿಟ್ಯೂಟ್, ಚಡಚನ, ಇಚಿಡಿ ತಾಲ್ಲೋಕು, ವಿಜಾಪುರ
5. ಅಧ್ಯಕ್ಷರು / ಕಾರ್ಯದರ್ಶಿ / ಪ್ರಾಂಶುಪಾಲರು, ಡಾ:ಆರ್.ಎನ್.ಬಿರಾದಾರ್ ಪ್ಯಾರಾ ಮೆಡಿಕಲ್ ಇನ್‌ಸ್ಟಿಟ್ಯೂಟ್, ಆದರ್ಶನಗರ, ವಿಜಾಪುರ
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ.
3. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ವೈದ್ಯಕೀಯ ಶಿಕ್ಷಣ ಇಲಾಖೆ.

No. PMB/03/2014-15 ದಿ: 19.09.2016

ಸರ್ಕಾರದ ಆದೇಶ ಸಂಖ್ಯೆ: ಆಕುಕ 97 MPS 2013 ದಿ: 16.09.2016 ರ ಪ್ರತಿಯನ್ನು ಈ ಕೆಳಕಂಡವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.

1800 1) ಪ್ರಾಂಶುಪಾಲರು, ಶ್ರೀ ಆರ್.ಎನ್. ಬಿರಾದಾರ್ ಪ್ಯಾರಾ ಮೆಡಿಕಲ್ ಕಾಲೇಜು, ಬಂಜಾರ ನಗರ, ವಿಜಾಪುರ.
1801 2) ಪ್ರಾಂಶುಪಾಲರು, SSRB ಪ್ಯಾರಾ ಮೆಡಿಕಲ್ ಇನ್ಸಿಟಿಟ್ಯೂಟ್, ಚಡ್‌ಚಣ, ಇಂಡಿ ತಾ॥, ವಿಜಾಪುರ.
1802 3) ಪ್ರಾಂಶುಪಾಲರು, ಡಾ॥ ಆರ್.ಎನ್. ಬಿರಾದಾರ್ ಪ್ಯಾರಾ ಮೆಡಿಕಲ್ ಇನ್ಸಿಟಿಟ್ಯೂಟ್, ಆದರ್ಶನಗರ, ವಿಜಾಪುರ.
1803 4) ಪ್ರಾಂಶುಪಾಲರು, ಡಾ॥ ಗೌಡರ್ಸ್ ಪ್ಯಾರಾ ಮೆಡಿಕಲ್ ಕಾಲೇಜು, ವಿಜಾಪುರ.
1804 5) ಪ್ರಾಂಶುಪಾಲರು, ರಾಧ ಕೃಷ್ಣ ಇನ್ಸಿಟಿಟ್ಯೂಟ್ ಆಫ್ ಪ್ಯಾರಾ ಮೆಡಿಕಲ್ ಸೈನ್ಸ್, ವಿಜಾಪುರ.
1805 6) ಪ್ರಾಂಶುಪಾಲರು, ಅಶ್ವಿನಿ ಇನ್ಸಿಟಿಟ್ಯೂಟ್ ಆಫ್ ಪ್ಯಾರಾ ಮೆಡಿಕಲ್ ಸೈನ್ಸ್ , ವಿಜಾಪುರ.
1806 7) ಪ್ರಾಂಶುಪಾಲರು, ಆಲ್ ಆಮೀನ್ ಪ್ಯಾರಾ ಮೆಡಿಕಲ್ ಕಾಲೇಜು, ವಿಜಾಪುರ.
1807 8) ಪ್ರಾಂಶುಪಾಲರು, ಆಧರ್ಶ ಪ್ಯಾರಾ ಮೆಡಿಕಲ್ ಕಾಲೇಜು, ತಾಳಿಕೊತೆ, ವಿಜಾಪುರ.
1808 9) ಪರೀಕ್ಷಾ ವಿಭಾಗ ಪ್ಯಾರಾ ಮೆಡಿಕಲ್ ಬೋರ್ಡ್ 21/9/16
10) ನೊಂದಣಿ ವಿಭಾಗ ಪ್ಯಾರಾ ಮೆಡಿಕಲ್ ಬೋರ್ಡ್ 21/9/16
11) ಕಚೇರಿ ಪತಿ.

21 SEP 2016

20/9/16
ಸದಸ. ಕಾರ್ಯದರ್ಶಿಗಳು

ಸದಸ್ಯ ಕಾರ್ಯದರ್ಶಿಗಳು
ರೆ ವೈದ್ಯಕೀಯ ಮಂಡಳಿ
ಬೆಂಗಳೂರು